ಇ) ಪ್ರಸ್ತುತ ನಿರ್ಧಾರದಿಂದ ಸಗಟು ಮಾರಾಟಗಾರರು ವ್ಯಾಪಾರದ ವಹಿವಾಟಿಗಾಗಿ ನೆರೆ ರಾಜ್ಯಕ್ಕೆ ವಲಸೆ ಹೊಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈ ವಿಷಯದಲ್ಲಿ ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುವುದು?

ಶ್ರೀ ಪ್ರಕಾಶ್ ಬಿ. ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು) :

ಅ) ಪ್ರಸ್ತುತ ಮಾವಿನ ಹಣ್ಣಿನ ಸಗಟು ಮಾರಾಟ ಹಣ್ಣು ಮತ್ತು ತರಕಾರಿ (ವಿಶೇಷ) ಕೃ.ಉ.ಮಾ.ಸ., ಬೆಂಗಳೂರು ಇದರ ಸಿಂಗೇನ ಅಗ್ರಹಾರ ಉಪ ಮಾರುಕಟ್ಟೆಯಲ್ಲಿ ನಡೆಯುತ್ತಿದೆ.

ಆ),ಇ) ಹೌದು. ಈ ವಿಷಯವನ್ನು ಎಚ್ಚರಿಕೆಯಿಂದ ಪರಿಶೀಲಿಸಲಾಗುತ್ತಿದೆ.

ಈ) ಸಿಂಗೇನ ಅಗ್ರಹಾರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಎಲ್ಲಾ ಹಣ್ಣಿನ ವಹಿವಾಟಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿ ಅಭಿವೃದ್ಧಿಪಡಿಸಿದೆ.

ಮುಂದಿನ ಹಂಗಾಮಿನಲ್ಲಿ ಸಿಂಗೇನ ಅಗ್ರಹಾರ ಉಪ ಮಾರುಕಟ್ಟೆಗಳಿಗೆ ಮಾವಿನ ಹಣ್ಣಿನ ಸಗಟು ವ್ಯಾಪಾರವನ್ನು ನಡೆಸಲು ಎಲ್ಲಾ ಪೂರಕ ಕ್ರಮಗಳನ್ನು ಜರುಗಿಸಲಾಗುವುದು.

527(809) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಚಾಮರಾಜನಗರದ ಬೆಲ್ಲದ ಮಾರುಕಟ್ಟೆಯಲ್ಲಿ ರೈತರಿಗೆ ಯಾವುದೇ ತೊಂದರೆಯಾಗದ ರೀತಿಯಲ್ಲಿ ಬೆಲ್ಲದ ವಿತರಣೆಯಾಗಲು ಕೈಗೊಂಡಿರುವ ಕ್ರಮಗಳೇನು;

ಆ) ಮಾರುಕಟ್ಟೆಯಲ್ಲಿ ಬೆಲ್ಲದ ಬೆಲೆ ಕುಸಿದಾಗ ಅದನ್ನು ಸುರಕ್ಷಿತವಾಗಿಟ್ಟು ಉತ್ತಮ ಬೆಲೆ ಸಿಗುವವರೆಗೆ ಕೆಡದ ಹಾಗೆ ಮಾರುಕಟ್ಟೆಯಲ್ಲಿ ಶೇಖರಿಸಲು ಸರ್ಕಾರವು ಯಾವುದಾದರೂ ಮಂಜಾಗರೂಕತೆ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿದೆಯೆ; (ವಿವರಗಳನ್ನು ನೀಡುವುದು)?

ಶ್ರೀ ಪ್ರಕಾಶ್ ಬಿ. ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು) :

ಅ) ಬೆಲ್ಲದ ಮಾರಾಟ ಮಾಡುವ ರೈತರಿಗೆ ತೊಂದರೆಯಾಗದಂತೆ ಚಾಮರಾಜನಗರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.

1) ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಗೋದಾಮು/ಸಣ್ಣ ಮಳಿಗೆಗಳು ಹಾಗೂ ಇತರ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಬೆಲ್ಲದ ಮಾರಾಟಕ್ಕಾಗಿ ಎಲ್ಲಾ ವ್ಯವಸ್ಥೆಗಳನ್ನು ಮಾಡಲಾಗಿದೆ.

2) ಕರಾರುವಾಕ್ಕದ ತೂಕವನ್ನು ನೀಡಲು ಎಲೆಕ್ಟ್ರಾನಿಕ್ ತೂಕದ ಯಂತ್ರಗಳನ್ನು ಅಳವಡಿಸಲಾಗುತ್ತಿದೆ.

3) ರೈತರ ತಮ್ಮ ಹುಟ್ಟುವಳಿಗಳನ್ನು ಮಾರಾಟಕ್ಕೆ ತಂದ ಸಂದರ್ಭದಲ್ಲಿ ಬೆಲೆಯಲ್ಲಿ ಏರುಪೇರು ಉಂಟಾದಲ್ಲಿ ರೈತರ ಹುಟ್ಟುವಳಿಯನ್ನು ಅಡವಿಟ್ಟು, ಬೆಲ್ಲದ ಮೌಲ್ಯದ ಶೇ.60ರಷ್ಟು ಅಥವಾ ರೂ. 10000-00 ಯಾವುದೋ ಹೆಚ್ಚೋ ಅದನ್ನು ರೈತರಿಗೆ ಪಾವತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ.

4) ಚಾಮರಾಜನಗರದ ಬೆಲ್ಲ ಉತ್ತಮ ಗುಣಮಟ್ಟದ್ದಾಗಿರುವ ಹಿನ್ನಲೆಯಲ್ಲಿ ಹಾಗೂ ಸದರಿ ಬೆಲ್ಲದಲ್ಲಿ ಹೈಡ್ರೋಸನ್ ಪ್ರಮಾಣ ಕಡಿಮೆ ಇರುವ ಹಿನ್ನಲೆಯಲ್ಲಿ ಅದನ್ನು "ಬ್ರಾಂಡ್" ಮಾಡಿ ಇತರ ಮಾರುಕಟ್ಟೆಗಳಿಗೆ ಬಿಡುಗಡೆ ಮಾಡಲು ಸೂಕ್ತವಾದ ಪ್ಯಾಕೆಜಿಂಗ್ ಹಾಗೂ ಇತರ ಕ್ರಮಗಳ ಬಗ್ಗೆ ಸಿ.ಎಫ್.ಟಿ.ಆರ್.ಐ.ನ ಜೊತೆ ಸಂಪರ್ಕ ಬೆಳೆಸಿದ್ದು, ಉತ್ಪಾದಿತ ಬೆಲ್ಲವನ್ನು ಇತರೆ ಮಾರುಕಟ್ಟೆಗಳಿಗೆ ಅಥವಾ ಕನ್ಸೂಮರ್ ಪಾಯಿಂಟ್ಸ್‌ಗಳಿಗೆ ತಲುಪಿಸಲು ಅನುಕೂಲವಾಗುವಂತೆ ರೈತ ಬೆಳೆಗಾರರ ಸಂಘಟನೆಗಳನ್ನು ರೂಪಿಸಲು ಸಹ ಮಾರುಕಟ್ಟೆ ಸಮಿತಿ ಕ್ರಮ ಕೈಗೊಂಡಿದೆ.

5) ರೈತರಿಂದ ಯಾವುದೇ ರೀತಿಯ ದಲ್ಲಾಲಿ ಪಡೆಯದೆ ಇರುವಂತೆ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದು, ಅದೇ ದಿನ ರೈತರಿಗೆ ಹಣ ಪಾವತಿ ಮಾಡಲು ಕ್ರಮ ಕೈಗೊಂಡಿದೆ.

ಆ) ಪ್ರಾಂಗಣದಲ್ಲಿ 2 ಎಕರೆ ಜಮೀನಿನಲ್ಲಿ ಶೀಥಲ ಗೃಹಕ್ಕಾಗಿ ಮೀಸಲಿದ್ದು, ಈ ಬಗ್ಗೆ ಅಧ್ಯಯನಕ್ಕೆ ಕೃಷಿ ವಿಶ್ವ ವಿದ್ಯಾಲಯವನ್ನು ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಬೆಂಗಳೂರು ಇವರನ್ನು ಕೋರಲಾಗಿದೆ.

528(713) ಶ್ರೀ ಯಡಿಯೂರಪ್ಪ ಬಿ.ಎಸ್. (ಶಿಕಾರಿಪುರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಮಂಡಳಿ ಹಾಗೂ ಸಿಂಡಿಕೇಟ್‌ಗಳ ಸದಸ್ಯರು ಯಾರು: (ವಿಶ್ವವಿದ್ಯಾಲಯವಾರು ಮಾಹಿತಿ ನೀಡುವುದು)

ಆ) ಈ ಸದಸ್ಯರನ್ನು ಯಾವಾಗ ನೇಮಕ ಮಾಡಲಾಯಿತು ಹಾಗೂ ಇವರ ಅವಧಿ ಎಷ್ಟು ವರ್ಷಗಳು;

ಇ) ಹಾಲಿ ಇರುವ ಶೈಕ್ಷಣಿಕ ಮಂಡಳಿ ಹಾಗೂ ಸಿಂಡಿಕೇಟ್ ಸದಸ್ಯರ ಮರು ನಾಮಕರಣ ಮಾಡಲು ಸರಕಾರ ನಿರ್ಧರಿಸಿದೆಯೆ; ಹಾಗಿದ್ದಲ್ಲಿ, ಕಾರಣಗಳೇನು;

ಈ) ಕಾಯಿದೆ ಪ್ರಕಾರ ಎಷ್ಟು ವರ್ಷಗಳಿಗೊಮ್ಮೆ ಮಂಡಳಿ ರಚನೆಯಾಗಬೇಕು?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ),ಆ) ವಿವರವನ್ನು ಅನುಬಂಧ-Iರಲ್ಲಿ ಲಗತ್ತಿಸಲಾಗಿದೆ.

ಇ) ಸದ್ಯಕ್ಕೆ ಇಂತಹ ಪ್ರಸ್ತಾವನೆ ಇರುವುದಿಲ್ಲ.

ಈ) 3 ವರ್ಷಗಳಿಗೊಮ್ಮೆ ಸದರಿ ಮಂಡಳಿಗಳು ರಚನೆಯಾಗುವವು.